REGD.NEWS PAPER RNI 50347/1989
RNI.Reg.No.KA/BGGPO/2516/2021-23
NO.MAG(3) /NPP/273 2022-2023
Licenced to post without Pre-payment
Registered Regn.No. PMG/BG/WPP-CO -1 /2021-2023
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009

ದೂರವಾಣಿ : 080–22206151 – 22206152 – 22206153

Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : ೩೬ ಅಕ್ಟೋಬರ್ ೨೦೨೩ ಬೆಲೆ : 1 ರೂ. ಪುಟಗಳು : 4 ಸಂಚಿಕೆ : 10



## ಕರ್ನಾಟಕ ಆರ್ಯವೈಶ್ಯ ಮಹಾಸಭೆ (ರಿ)

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009

# 13ನೇ ಪ್ರತಿಭೋತ್ಸವ

## ದಿನಾಂಕ: 05-11-2023, ಭಾನುವಾರ

ಸ್ಥಳ: ರಾಣಿ ಅಬ್ಬಕ್ಕ ಆಟದ ಮೈದಾನ, ಮಹಾಲಕ್ಷ್ಮೀ ಲೇಔಟ್
ಬೆಂಗಳೂರು ( ಮಹಾಲಕ್ಷ್ಮೀ ಪುರಂ ಮೆಟ್ರೋ ಹಿಂಭಾಗ)

# ಆತ್ಮೀಯ ಆಮಂತ್ರಣ

★★★

**ಬೆಳಗ್ಗೆ 8.00 ಘಂಟೆಗೆ :** ಪ್ರತಿಭಾ ಶೋಭಾಯಾತ್ರೆ

**ಉದ್ಘಾಟನೆ :** ಶ್ರೀ ಎನ್ ಎಲ್ ನರೇಂದ್ರ ಬಾಬು,
ಮಾಜಿ ಶಾಸಕರು, ಮಹಾಲಕ್ಷ್ಮೀ ಪುರಂ

**ಮುಖ್ಯ ಆಹ್ವಾನಿತರು :** ಶ್ರೀ ಡಿ ಕೆ ಸತ್ಯನಾರಾಯಣ ಶೆಟ್ಟಿ,
ಗೌರವ ಅಧ್ಯಕ್ಷರು, MSVSST, ಮಹಾಲಕ್ಷ್ಮೀ ಪುರಂ

## 13ನೇ ಪ್ರತಿಭೋತ್ಸವ ಉದ್ಘಾಟನೆ

**10.30 ಘಂಟೆಗೆ :** ಸನ್ಮಾನ್ಯ ಶ್ರೀ ಜಿ ಪರಮೇಶ್ವರ್,
ಮಾನ್ಯ ಗೃಹಸಚಿವರು, ಕರ್ನಾಟಕ ಸರ್ಕಾರ

**"ವಿದ್ಯಾವಾರಿಧಿ" ಅಂತರ್‌ರಾಷ್ಟ್ರೀಯ ಶಾಲೆ ಲಾಂಛನ ಲೋಕಾರ್ಪಣೆ :** ಸನ್ಮಾನ್ಯ ಶ್ರೀ ಬಿ ಎಸ್ ಯಡಿಯೂರಪ್ಪ
ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಮುಖ್ಯ ಆಹ್ವಾನಿತರು:**
ಶ್ರೀ ಡಿ ಎಸ್ ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್
ಶ್ರೀ ಕೆ ಗೋಪಾಲಯ್ಯ, ಶಾಸಕರು, ಮಹಾಲಕ್ಷ್ಮೀಪುರ ಕ್ಷೇತ್ರ
ಶ್ರೀ ಹೆಚ್ ಪಿ ಮಂಜುನಾಥ್, ಮಾಜಿ ಶಾಸಕರು, ಹುಣಸೂರು ಕ್ಷೇತ್ರ
ಶ್ರೀ ಗಿರೀಶ್, ಐ.ಎ.ಎಸ್, Director - Mines and Geology Dept , Govt of Karnataka

**ಅಧ್ಯಕ್ಷತೆ :** ಶ್ರೀ ಆರ್ ಪಿ ರವಿಶಂಕರ್, ಅಧ್ಯಕ್ಷರು, ಕರ್ನಾಟಕ ಆರ್ಯವೈಶ್ಯ ಮಹಾಸಭಾ

# ಸರ್ವರಿಗೂ ಆದರದ ಸ್ವಾಗತ

## ಅಭಿನಂದನೆಗಳು

# ವಿಶ್ವಕ್ಕೆ ಮಾದರಿ ಭಾರತದ ನಾರಿ ಉಕ್ಕಿನ ಮಹಿಳೆ ಶ್ರೀಮತಿ ನಿರುಪ ಶಂಕರ್

ಪುರಾಣ ಕಾಲಗಳಿಂದಲೂ ಇಂದಿನವರೆವಿಗೂ ಮಹಿಳೆ ಪರಾಕ್ರಮಗಳನ್ನು ಮೆರೆದಿರುವುದನ್ನು ಇತಿಹಾಸದ ಪುಟಗಳಲ್ಲಿ ತೆರೆದಿಟ್ಟಿದ್ದರೂ ಸಾಮಾನ್ಯ ನಾಗರೀಕನು ಹೇಳುವ ಭಾಷೆ ಹೆಣ್ಣು ಅಬಲೆ, ಆದರೇ ಹೆಣ್ಣು ಸಬಲತೆಯ ಸರ್ವೋತ್ಕೃಷ್ಟತೆಯನ್ನು ಮೆಟ್ಟಿ ನಿಂತು ದೇಶದ ಕೀರ್ತಿಯನ್ನು ಉತ್ತುಂಗಕ್ಕೇರಿಸಿ ಸಾಧನೆಯನ್ನು ಮಾಡಿದ ನಮ್ಮ ಸಮಾಜದ ವಿನಯ ಶೀಲೆ, ಯಶಸ್ವಿ ಉದ್ಯಮಿ. **ಶ್ರೀಮತಿ ನಿರೂಪ ಶಂಕರ್**ರವರು ದಿನಾಂಕ 08.10.2023ರಲ್ಲಿ ಯುರೋಪ್ ಖಂಡದ ಡೆನ್ಮಾರ್ಕ್ ದೇಶದಲ್ಲಿ ಮಾಡಿರುವ ಸಾಧನೆ ಅತ್ಯದ್ಭುತ. ಇವರ ಸಾಧನೆಯು ಎಂತವರನ್ನೂ ಹುಬ್ಬೇರಿಸುವಂತೆ ಮಾಡುತ್ತದೆ. ಬ್ರಿಗೇಡ್ ಎಂಟರ್‌ಪ್ರೈಸಸ್ ದೇಶದ ಜನರಿಗೆ ಅತ್ಯುತ್ತಮವಾದ ಗೃಹ ನಿರ್ಮಾಣಗಳನ್ನು ನೀಡಿರುವ ದೈತ್ಯ ಸಂಸ್ಥೆ. ಬ್ರಿಗೇಡ್ ಸಂಸ್ಥೆ ಭಾರತ ದೇಶದ ಹೆಮ್ಮೆಯು ಹೌದು. ಇಂತಹ ಸಂಸ್ಥೆಯ ಅಡಿಷನಲ್ ಮ್ಯಾನೇಜಿಂಗ್ ಡೈರಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಉತ್ಸಾಹದ ಚಿಲುಮೆ ಯೌವನದ ಒಡತಿ ಶ್ರೀಮತಿ ನಿರೂಪ ಶಂಕರ್ 2023ರ ಆಗಸ್ಟ್ ತಿಂಗಳಿನಲ್ಲಿ ಡೆನ್ಮಾರ್ಕ್ ದೇಶದ ಕೋಪನ್ ಹ್ಯಾಗನ್ ನಗರದಲ್ಲಿ ನಡೆದ ವಿಶ್ವಮಟ್ಟದ Iron Man ಸ್ಪರ್ಧೆಗಳಲ್ಲಿ ಭಾರತ ದೇಶವನ್ನು ಪ್ರತಿನಿಧಿಸಿದ್ದ 5 ಸ್ಪರ್ಧಿಗಳಲ್ಲಿ ಶ್ರೀಮತಿ ನಿರೂಪ ಶಂಕರ್‌ರವರು ಒಬ್ಬರು.



ಶ್ರೀಮತಿ ನಿರೂಪ ಶಂಕರ್

### ಸ್ಪರ್ಧೆಯ ವೈಶಿಷ್ಟ್ಯತೆ:

**ಮೊದಲಿಗೆ ಆಳ ಸಮುದ್ರದಲ್ಲಿ 3.8 ಕಿ.ಮಿಗಳ ಈಜಿನ ಸಾಹಸ, ಅದಾದಕೂಡಲೇ, 180 ಕಿ.ಮಿಗಳ ಸೈಕಲಿಂಗ್ ಸಾಹಸ ಮುಗಿಯುತ್ತಿದ್ದಂತೆ 42.2 ಕಿ.ಮಿಗಳ ಓಟ, ಈ ಎಲ್ಲಾ ಸಾಹಸಗಳನ್ನು ಕೇವಲ 14 ಘಂಟೆ 42 ನಿಮಿಷಗಳಲ್ಲಿ ಪೂರ್ಣಗೊಳಿಸಿ**ದ 2 ಮಕ್ಕಳ ಮಹಾತಾಯಿ ಶ್ರೀಮತಿ ನಿರೂಪ ಶಂಕರ್ ಇವರ ಸಾಧನೆ, ಸಾಹಸವೂ, ಹೌದು, ಅತ್ಯದ್ಭುತವೂ ಹೌದು, ಯುವಜನತೆಗೆ ಆದರ್ಶವೂ ಹೌದು, **ವಿಶ್ವದ ಉಕ್ಕಿನ ಮಹಿಳೆ** ನಮ್ಮ ಆರ್ಯವೈಶ್ಯ ಮಹಿಳೆ ಎಂದು ಹೇಳಿಕೊಳ್ಳಲು ಅತೀವ ಸಂತೋಷವಾಗುತ್ತದೆ. ಶಿಕ್ಷಣದಲ್ಲಿ, ವ್ಯವಹಾರಿಕ ಜೀವನದಲ್ಲಿ, ಸಾಹಸದಲ್ಲಿ ಸರಿಸಾಟಿ ಇಲ್ಲದಂತೆ ಮುನ್ನುಗ್ಗಿ, ದಾಪುಗಾಲು ಹಾಕುತ್ತಿರುವ **ಶ್ರೀಮತಿ. ನಿರೂಪ ಶಂಕರ್ ವ್ಯವಹಾರಿಕ ಜಗತ್ತಿನ ಮುಕುಟ ಪ್ರಾಯವಾಗಿ ದೇಶದ ಆಸ್ತಿಯಾಗಿ ಬೆಳೆಯಲೆಂದು** ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಶುಭಹಾರೈಸಿ, ಅಭಿನಂದಿಸುತ್ತದೆ.

# ಶ್ರೀ ವಾಸವಿ ದೇವಾಲಯಗಳ ಮಹಾ ಅಧಿವೇಶನ

## ದಿನಾಂಕ 7–1–2024ರ ಭಾನುವಾರದಂದು ದಾವಣಗೆರೆ ನಗರದಲ್ಲಿ

ರಾಜ್ಯದ್ಯಂತ ಧಾರ್ಮಿಕ ಶಕ್ತಿಯಾಗಿ ಕಂಗೊಳಿಸುತ್ತಿರುವ 276 ವಾಸವಿ ದೇವಾಲಯಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಕೋಶಾಧ್ಯಕ್ಷರುಗಳ **ಮಹಾ ಅಧಿವೇಶನವನ್ನು ದಿನಾಂಕ 7–1–2024ರ ಭಾನುವಾರ ದಾವಣಗೆರೆಯಲ್ಲಿ** ನಡೆಸಲು ಸಿದ್ಧತೆಗಳು ನಡೆದಿವೆ. ರಾಜ್ಯದ ಪ್ರತಿಯೊಂದು ವಾಸವಿ ದೇವಾಲಯಗಳ ಆಡಳಿತ ಮಂಡಳಿಯ ಗರಿಷ್ಠ 3 ಪ್ರತಿನಿಧಿಗಳು ಕಡ್ಡಾಯವಾಗಿ ಮಹಾಅಧಿವೇಶನದಲ್ಲಿ ಭಾಗವಹಿಸಿ. ನಮ್ಮ ದೇವಾಲಯಗಳನ್ನು ವಿಶ್ವಕ್ಕೆ ಪರಿಚಯಿಸುವಂತಹ ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸಬೇಕೆಂದು ವಿನಂತಿಸುತ್ತೇವೆ.

| ಆರ್ ಎಲ್ ಪ್ರಭಾಕರ್ | ನಾಗೇಶ್ ಬಾಬು ಪಿ |
|---|---|
| ಅಧ್ಯಕ್ಷರು | ಕಾರ್ಯದರ್ಶಿಗಳು |
| Ph: 9448045683 | Ph: 9845015030 |



ಚೌದರಿ ಅಪ್ಪಾಜಯ್ಯ ಶೆಟ್ಟರ ಧರ್ಮ ಛತ್ರ ಇವರ ಸಹಕಾರ

# ವೈಶ್ಯ ಹಾಸ್ಟೆಲ್–ಮೈಸೂರು

ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಅರ್ಜಿಗಳಿಗೆ ಆಹ್ವಾನ

ಅರ್ಜಿಗಳನ್ನು ಭರ್ತಿ ಮಾಡಿ ಅವಶ್ಯ ದಾಖಲೆಗಳೊಂದಿಗೆ ಮತ್ತು ನೋಂದಾವಣಿ ಶುಲ್ಕ ರೂ 100/– ರೊಂದಿಗೆ ಮಹಾಸಭೆ ಕಛೇರಿಗೆ ಕಳುಹಿಸಿಕೊಡಲು ಕೋರಿದೆ. ವಿವರಗಳಿಗೆ ಸಂಪರ್ಕಿಸಿ: 080–22206151/52, 9663900439

ಮೈಸೂರು ನಗರದ ಗೀತಾ ಮಂದಿರದ ರಸ್ತೆಯಲ್ಲಿ, (ಅಶೋಕ ರಸ್ತೆಯ ಪಕ್ಕದಲ್ಲಿ) **ನೂತನವಾಗಿ** ನಿರ್ಮಾಣವಾಗುತ್ತಿರುವ ವೈಶ್ಯ ಹಾಸ್ಟೆಲ್‌ನಲ್ಲಿ 2023–24ನೇ ಸಾಲಿನ ಉನ್ನತ ಶಿಕ್ಷಣದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಹಾಸ್ಟೆಲ್‌ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವೆಬ್‌ಸೈಟ್: **www.kavms.com**




ವಿ.ಸೂ. ನೋಂದಣಿ ಶುಲ್ಕ ರೂ 100/–ನ್ನು ಪಾವತಿ ಮಾಡಲು ನಗದು / ಚೆಕ್ ಅಥವಾ ಬ್ಯಾಂಕ್ ಖಾತೆಯ QR CODE ಅನ್ನು ಬಳಸಿ

# ಮೈಸೂರು ನಗರದಲ್ಲಿ ಪಿ ಜಿ ಲಭ್ಯವಿದೆ

ಮೈಸೂರು ನಗರದಲ್ಲಿ ಅಶೋಕ ರಸ್ತೆಗೆ ಹೊಂದಿಕೊಂಡಿರುವ ನೂತನವಾಗಿ ನಿರ್ಮಾಣವಾಗಿರುವ ಹಾಸ್ಟೆಲ್ ಕಟ್ಟಡದಲ್ಲಿ ಮೈಸೂರು ನಗರದಲ್ಲಿ ಉದ್ಯೋಗ ಮಾಡುತ್ತಿದ್ದು ಉತ್ತಮವಾದ ಪಿಜಿ ವ್ಯವಸ್ಥೆ ಬೇಕಾಗಿದ್ದಲ್ಲಿ

ಸಂಪರ್ಕಿಸಿ: **9663900439**

ಅಪ್ಲಿಕೇಶನ್‌ಗಾಗಿ QR ಕೋಡನ್ನು ಸ್ಕ್ಯಾನ್‌ಮಾಡಿ

# ಅಧ್ಯಕ್ಷರ ನುಡಿ

ಹಬ್ಬ ಹರಿದಿನಗಳ ಆಚರಣೆಗಳು ಕೇವಲ ಸಂಪ್ರದಾಯಗಳಲ್ಲ, ಕೇವಲ ಪೂಜೆಗಳಿಗೆ, ವಿಶೇಷ ಅಡುಗೆಗಳಿಗೆ ಮಾತ್ರ ಸೀಮಿತವಲ್ಲ. ಸಂಘಟಿತ ಹಬ್ಬಗಳ ಆಚರಣೆಯಿಂದ ವ್ಯಕ್ತಿಗಳಲ್ಲಿನ ವ್ಯಕ್ತಿತ್ವ ಪರಿಚಯವಾಗುತ್ತದೆ. ಹಬ್ಬಗಳ ಸಾರ್ವಜನಿಕ ಆಚರಣೆಗಳ ಮೂಲಕ **ನಮ್ಮಲ್ಲಿ ಸುಪ್ತವಾಗಿರುವ ಚೇತನಗಳು ಜಾಗೃತವಾಗಿ ನಾಯಕತ್ವದ ಗುಣಗಳನ್ನು ಉದ್ದೀಪನ ಗೊಳಿಸುತ್ತದೆ,** ವ್ಯಕ್ತಿ – ವ್ಯಕ್ತಿಗಳ ನಡುವೆ ಪ್ರೀತಿ, ವಿಶ್ವಾಸ, ಪರಸ್ಪರ ನಂಬಿಕೆ, ಹೊಸ ಅವಿಷ್ಕಾರಗಳ ಸಾಧ್ಯತೆಗಳು ಹೆಚ್ಚಾಗುತ್ತದೆ. ದೇಶೀಯ ಸಂಪ್ರದಾಯಗಳ ಆಚರಣೆಗಳನ್ನು ಮುಂದಿನ ಪೀಳಿಗೆಗಳಿಗೆ ಕೊಂಡೊಯ್ಯುತ್ತಾ ಧರ್ಮ ಸಂರಕ್ಷಕರನ್ನು ಸೃಷ್ಟಿಸಿ, ಈ ಮಣ್ಣಿನ ಧಾರ್ಮಿಕ, ಸಾಂಸ್ಕೃತಿಕ, ಸಂಸ್ಕಾರಯುತ ಮೌಲ್ಯಗಳನ್ನು ಅಚಂದ್ರಾರ್ಕವಾಗಿ ಮುನ್ನಡೆಸುವ ಪೀಳಿಗೆಗಳ ಸೃಷ್ಟಿಯೊಂದಿಗೆ **ಹಬ್ಬಗಳ ಆಚರಣೆಯಲ್ಲಿರುವ ಮೌಲ್ಯಗಳನ್ನು ಮೈಗೂಡಿಸಿಕೊಂಡು ನಾಡು–ನುಡಿಯ ರಕ್ಷಕರಾಗಿ ಬೆಳೆದು, ಬೆಳೆಸುವ ಒಂದು ಕ್ರಿಯಾ ಶಕ್ತಿಯೇ ಹಬ್ಬಗಳ ಆಚರಣೆ.** ಅಂತಹ ಸಾರ್ವಜನಿಕ ಹಬ್ಬಗಳಲ್ಲಿ ಶ್ರೀ ಗಣೇಶ ಚತುರ್ಥಿ ಹಾಗೂ ನವದುರ್ಗೆಯರ ಆರಾಧನೆಯ ನವರಾತ್ರಿ ಬಹಳ ಪ್ರಮುಖವಾದದ್ದು.

ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿಯೇ ಸಂಘಟನೆಯ ಮೌಲ್ಯಗಳನ್ನು ತಿಳಿಸಿಕೊಟ್ಟ ಹಬ್ಬ ಶ್ರೀ ವಿನಾಯಕ ಚತುರ್ಥಿ. ಹತ್ತು ದಿನಗಳ ಕಾಲ ನಾಡದೇವಿಯ ಆರಾಧನೆಯೊಂದಿಗೆ ಲೋಕಕಲ್ಯಾಣವನ್ನು ಬಯಸಿ ನವದುರ್ಗೆಯರನ್ನು ಪೂಜಿಸಿ, ಆರಾಧಿಸಿ, ಪ್ರಾರ್ಥಿಸುವ ನವರಾತ್ರಿ ಹಬ್ಬವನ್ನು ದೇಶಾದ್ಯಂತ ಜಾತಿ–ಮತ ಭೇದವಿಲ್ಲದೆ ಸಮಸ್ತ ಭಾರತೀಯರು ಶ್ರದ್ಧಾಭಕ್ತಿಗಳಿಂದ ಸಾಂಸ್ಕೃತಿಕ ವೈಭವಗಳೊಂದಿಗೆ ಆಚರಿಸುವ ಹಬ್ಬ. ನವರಾತ್ರಿ ರಾಜ್ಯಾದ್ಯಂತ ಇರುವ 276 ಶ್ರೀ ವಾಸವಿ ದೇವಾಲಯಗಳಲ್ಲಿ ಆರ್ಯವೈಶ್ಯ ಸಮಾಜವು ವಿಶೇಷ ಪೂಜೆಗಳು, ಭವ್ಯವಾದ ಅಲಂಕಾರಗಳೊಂದಿಗೆ ಆಚರಣೆ ಮಾಡುವುದಲ್ಲದೆ, ಮನೆ–ಮನೆಯಲ್ಲಿಯೂ ಸಂಸ್ಕಾರವೆತ್ತ ಆಚರಣೆಗಳೊಂದಿಗೆ **ಸರ್ವೆಜನಾಃ ಸುಖಿನೋ ಭವಂತು** ಎಂದು ಮಾನವ ಕಲ್ಯಾಣ ಬಯುಸುವ ದಿವ್ಯ ಪರಂಪರೆಯ ಹಬ್ಬಗಳ ಆರಾಧಕರಾಗಿ, **ವಿವಿಧತೆಗಳ ಮೂಲಕ ಏಕತೆ** ಎಂದು ಸಾರಿ, **ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಪೋಷಿಸುವ ರಾಯಭಾರಿಗಳಾಗಿ, ಪ್ರಕೃತಿಯ ಸಮೃದ್ಧಿಗೆ, ದೇಶದ ಸುಭೀಕ್ಷೆಗಾಗಿ ಸದಾಕಾಲ ಪ್ರಾರ್ಥನೆ ಸಲ್ಲಿಸುತ್ತಿರುವ ಪ್ರತಿಯೊಬ್ಬ ಸಾಂಪ್ರದಾಯಸ್ತರಿಗೂ ಶಿರಸಾಸ್ಟಾಂಗ ನಮನಗಳು.**

ಈ ದೇಶ ನಮ್ಮದು, ಈ ದೇಶದ ಸಂಸ್ಕೃತಿ ನಮ್ಮದು, ಈ ನೆಲದ ಸಂಸ್ಕೃತಿಯನ್ನು ಉಳಿಸಿ, ಬೆಳಸಿ, ಪೋಷಿಸಿ ತಲಾತಲಾಂತರಗಳವರೆವಿಗೂ ಕೊಂಡೊಯ್ಯಬೇಕಾದ ಜವಾಬ್ದಾರಿ ನಮ್ಮದು. ನಾವು ಆಚರಿಸೋಣ, ನಮ್ಮ ಮಕ್ಕಳು ಆಚರಿಸಲು ಕಲಿಸೋಣ, ಅವರ ಮಕ್ಕಳೂ... ಸಹ ಆಚರಿಸಿ **ದೇಶದ ಭವ್ಯತೆಯನ್ನು ಅಖಂಡತೆಯನ್ನು ಸಾರುವ ಈ ನಾಡಿನ ಸಾಂಸ್ಕೃತಿಕ ಸೌರಭದ ಪಲ್ಲಕಿಯನ್ನು ಹೊತ್ತು–ಸಾಗಲು ಕಲಿಸೋಣ.** ಇದೇ ನಾವು ನಮ್ಮ ನಾಡಿಗೆ ನೀಡುವ ಕೊಡುಗೆ ಅಲ್ಲವೇ?

**ಭರತ ಭೂಮಿಯೆಂಬ ಪುಣ್ಯನೆಲದಲ್ಲಿ ನಮಗೆ ಜನ್ಮ ದೊರೆತಿದೆ,** ಗಂಗೆ, ಯಮುನಾ, ಗೋದಾವರಿ, ಸರಸ್ವತಿ, ನರ್ಮದೇ, ಸಿಂಧೂ, ಕಾವೇರಿಯಂತಹ **ಪವಿತ್ರ ಜೀವಜಲದ ಹನಿ ಹನಿಗಳು ನಮ್ಮ ಜೀವದ ಜೀವನವನ್ನು ಪಾವನಗೊಳಿಸಿವೆ.** ಹಿಮಾಲಯ, ವಿಂಧ್ಯ ಪರ್ವತಗಳ ಮೂಲಕ ಬೀಸುತ್ತಿರುವ **ಪರಿಶುದ್ದಗಾಳಿ ನಮ್ಮ ಜೀವದ ಉಸಿರನ್ನು ಹಸಿರಾಗಿಸಿದೆ.** ಪೌಷ್ಟಿಕಾಂಶಗಳಿಂದ ತುಂಬಿದ ಈ ಪವಿತ್ರ ಮಣ್ಣಿನಲ್ಲಿ ಬೆಳೆದ ಆಹಾರ ಪದಾರ್ಥಗಳು **ಈ ದೇಹಕ್ಕೆ ಶಕ್ತಿಯನ್ನು ನೀಡಿದೆ.** ಸಾವಿರ ಸಾವಿರ ಮಠ ಮಂದಿರಗಳಿಂದ ಅವಿರ್ಭವಿಸಿ ಲೋಕಕ್ಕೆ ಜ್ಞಾನದ ಬೆಳಕನ್ನು ಚೆಲ್ಲಿರುವ, ಪರಮ ಪುಣ್ಯ ಆತ್ಮಗಳ ಭೋದನೆ **ನಮಗೆ ಅಕ್ಷರ ಜ್ಞಾನವನ್ನು ನೀಡಿದೆ.** ಇಂತಹ **ಪುಣ್ಯ ಭೂಮಿಯಲ್ಲಿ ಜನ್ಮ ಪಡೆದ ನಾವೇ ಧನ್ಯರಲ್ಲವೇ?** ನಾವು ಜೀವನೋಪಾಯಕ್ಕಾಗಿ ವಿಶ್ವದ ಯಾವುದೇ ದೇಶಕ್ಕೇ ಬೇಕಾದರೂ ಹೋಗಿ ನೆಲಸಬಹುದು, **ಆದರೆ, ನಮ್ಮ ದೇಶ ಭಾಷೆ, ಸಂಸ್ಕೃತಿಗಳ ಅಸ್ಮಿತೆಯನ್ನು ಮೈಗೂಡಿಸಿಕೊಂಡು ವಿಶ್ವದಲ್ಲಿ ಎಲ್ಲಿದ್ದರೂ ಸಹ ನಮ್ಮತನವನ್ನು ಉಳಿಸಿಕೊಳ್ಳಬೇಕು,** ಆಚರಣೆಯಲ್ಲಿರಿಸಿಕೊಳ್ಳಬೇಕು, ಅದುವೇ, **ನಾವು ನಮ್ಮ ಜನ್ಮ ಭೂಮಿಗೆ, ತಾಯ್ನಾಡಿಗೆ, ಜನ್ಮದಾತರಿಗೆ ನೀಡುವ ಅತ್ಯಮೂಲ್ಯ ಕೊಡುಗೆ,** ಸಂಸ್ಕಾರವನ್ನರಿತ ಪ್ರತಿಯೊಬ್ಬರು ಇದನ್ನು ಒಪ್ಪಿವಿರೆಂದು ಭಾವಿಸುತ್ತೇನೆ. ನಮ್ಮ ಸಂಸ್ಕೃತಿ, ನಮ್ಮ ಪರಂಪರೆಗಳನ್ನು ಉಳಿಸಿ–ಬೆಳೆಸುವ ಕಾರ್ಯದಲ್ಲಿ ನಿರತರಾಗಲು ಹಿರಿಯರಾದ ನಾವುಗಳು **ಆಯಾ ಕಾಲಕ್ಕೆ ತಕ್ಕಂತೆ ಮಕ್ಕಳಿಗೆ ದೇಶ–ಭಾಷೆ, ನಾಡು–ನುಡಿ, ಸಂಸ್ಕೃತಿ–ಸಂಸ್ಕಾರ, ಧರ್ಮ–ಶ್ರದ್ದೆಗಳ ನೈತಿಕ ಭೋಧನೆಯನ್ನು ಮಾಡಿದಾಗ ಮಾತ್ರವೇ ಈ ಮಣ್ಣಿನ ಋಣ ತೀರಿಸಿದಂತಾಗುತ್ತದೆ.** ನಮ್ಮ ನಮ್ಮ ಮನೆಗಳಿಂದಲೇ ಈ ಕಾರ್ಯ ನಿರಂತರವಾಗಿ ಸಾಗಿ ಆದರ್ಶ ಪೀಳಿಗೆಗೆ ನಾಂದಿಯಾಗಬೇಕು, ಅಲ್ಲವೇ?

ಪ್ರತಿಯೊಬ್ಬ ದೇಶವಾಸಿಯೂ ಅರಿಯಬೇಕಿರುವ ಅತ್ಯಂತ ಪ್ರಮುಖ ವಿಷಯ ಎಂದರೇ ನಮ್ಮ **ಯಾವುದೇ ಜಾತಿ, ಮತ, ಕುಲ, ಶ್ರೀಮಂತಿಕೆ, ವ್ಯಾಪಾರ, ವ್ಯವಹಾರ, ಉದ್ಯಮಗಳೆಲ್ಲಕ್ಕಿಂತಲೂ ಮಿಗಿಲಾದದ್ದು ದೇಶ ಪ್ರೇಮ.** ನಮಗೆ **ಜನ್ಮ ನೀಡಿದ ದೇಶ ಭದ್ರವಾಗಿದ್ದರೆ, ಸಮೃದ್ದವಾಗಿದ್ದರೇ ಮಾತ್ರವೇ ಉಳಿದೆಲ್ಲವೂ ನಮಗೆ ಶೋಭೆ, ದೇಶಭಕ್ತಿಯಿಲ್ಲದ ರಾಷ್ಟ್ರಕನಾಗಿ ಬಾಳುವುದು ಜೀವ ಕಳೆದುಕೊಂಡ ದೇಹದಂತೆ.** ದೇಶ ಭಕ್ತಿಗೆ, ರಾಷ್ಟ್ರಹಿತಕ್ಕೆ ಇತ್ತೀಚಿನ ತಾಜಾ ಉದಾಹರಣೆ ಇಸ್ರೇಲ್ ದೇಶದ ನಾಗರೀಕರು, ಅದರಲ್ಲೂ ವಿರೋಧ ಪಕ್ಷಗಳು ಸಹ ದೇಶದ ಹಿತಕ್ಕಾಗಿ ಪರಸ್ಪರ ಬೆಂಬಲವಾಗಿ ನಿಂತು **ದೇಶ ಮೊದಲು ರಾಜಕೀಯ ನಂತರ** ಎಂದು ಲೋಕಕ್ಕೆ ಮಾದರಿ ಆಗಿರುವುದನ್ನು ನಾವುಗಳು ಕಳೆದ 15 ದಿನಗಳಿಂದಲೂ ಮಾಧ್ಯಮಗಳ ಮೂಲಕ, ಸಾಮಾಜಿಕ ಜಾಲತಾಣಗಳ ಮೂಲಕ ತಿಳಿದುಕೊಂಡು ಬಂದಿದ್ದೇವೆ, ಇದೇ ಸಂದರ್ಭದಲ್ಲಿ **ಇಸ್ರೇಲ್ ದೇಶಕ್ಕೆ ಬೆಂಬಲ ಘೋಷಿಸಿದ ನಮ್ಮ ಸರ್ಕಾರದ ವಿರುದ್ದವಾಗಿಯೇ ನಮ್ಮ ದೇಶದ ವಿರೋಧ ಪಕ್ಷವೊಂದು ಪ್ಯಾಲೆಸ್ಟೀನ್ ಹಮಾಸ್ ಉಗ್ರರಿಗೆ ನಮ್ಮ ಬೆಂಬಲವೆಂದು ಘೋಷಿಸಿದ ವಿಪರೀತವನ್ನು** ಕೇಳಿ ದಂಗಾಗಿದ್ದೇವೆ. ದೇಶ, ದೇಶದ ಸಾರ್ವಭೌಮತ್ವದ ಅರಿವಿಲ್ಲದೆ **ಸ್ವಾರ್ಥಕ್ಕಾಗಿ ರಾಜಕಾರಣ ಮಾಡುವ ಶಕ್ತಿಗಳಿಂದ ದೇಶದ ಉಳಿವು ಸಾಧ್ಯವೇ?** ನಮ್ಮ ದೇಶದ ಭೂ ಅಳತೆ ಹಾಗೂ ಜನಸಂಖ್ಯೆಗೆ ಹೋಲಿಸಿದರೆ ಇಸ್ರೇಲ್ ಅತೀ ಪುಟ್ಟ ದೇಶ ಆದರೆ ಸ್ವಾಭಿಮಾನದಲ್ಲಿ ದೇಶಪ್ರೇಮದಲ್ಲಿ ವಿಶ್ವಕ್ಕೆ ಮಾದರಿ. **ರಾಷ್ಟ್ರಕ್ಕೆ ಕಷ್ಟ ಬಂದಾಗ ಶ್ರೀಮಂತನಾಗಿರುವುದು ನಾಚಿಕೆಗೇಡು** ಎಂದು ತಿಳಿದ ಕಾರಣದಿಂದಲೇ ಇಸ್ರೇಲಿಗರು, ಪ್ಯಾಲೆಸ್ಟೀನ್ ಉಗ್ರರನ್ನು ಕೆಲವೇ ಘಂಟೆಗಳಲ್ಲಿ ಬಗ್ಗು ಬಡಿಯಲು ಸಾಧ್ಯವಾದದ್ದು, ಅಂತಹ ಹೃದಯ ಶ್ರೀಮಂತಿಕೆ ದೇಶಭಕ್ತರು ಮನೆ ಮನೆಯಲ್ಲೂ ಉದಯಿಸಿದರೆ ಭಾರತ ದೇಶದ ಅಖಂಡತೆಗೆ ಸರಿ ಸಾಟಿಯೇ ಇರುವುದಿಲ್ಲ, **ದೇಶದ ಸಾರ್ವಭೌಮತ್ವ ಸಾಕಾರವಾಗಲು ನಾವೇನು ಮಾಡಬೇಕು...?**



> ದೇಶ ಮೊದಲು, ನಂತರ ಉಳಿದೆಲ್ಲಾ ಎನ್ನುವ ಪರಮೋಚ್ಚ ನೀತಿಗೆ ಕಟಿ ಬದ್ದರಾಗಿ ನಿಲ್ಲಬೇಕು.
> ದೇಶದ ಅಖಂಡತೆ ಎದುರಿಗೆ ಬಂದಾಗ, ಜಾತಿ, ಮತ, ಭಾಷೆ, ಎಲ್ಲವೂ, ನಗಣ್ಯ.
> ದೇಶದಲ್ಲಿದ್ದು ಪರದೇಶ ಪ್ರೀತಿಸುವ ಮನಸ್ಸುಗಳನ್ನು ಆರಂಭದಲ್ಲೇ ಚಿವುಟಿ ಹಾಕಬೇಕು.
> ದೇಶೀಯ ಸಂಸ್ಕೃತಿಯನ್ನು ದ್ವೇಷಿಸುವ ವ್ಯಕ್ತಿಗಳನ್ನು/ಗುಂಪುಗಳನ್ನು ಸಮಗ್ರವಾಗಿ ಮಟ್ಟಹಾಕಬೇಕು.
> ರಾಜಕೀಯ ಲಾಭಗಳಿಗಾಗಿಯೇ ದೇಶದ ಗೌರವಕ್ಕೆ ಧಕ್ಕೆತರುವ ವ್ಯಕ್ತಿಗಳನ್ನು/ಪಕ್ಷಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕು.
> ಯುವ ಜನಾಂಗಕ್ಕೆ ದೇಶದ ಇತಿಹಾಸದ ಸತ್ಯ ದರ್ಶನ ಮಾಡಿಸಬೇಕು.
> ನಮ್ಮ ನಮ್ಮ ಮನೆಗಳಲ್ಲಿರುವ ಪ್ರತಿಯೊಬ್ಬರ ದಮನಿ ದಮನಿಗಳಲ್ಲಿ ದೇಶದ ಸರ್ವತೋಮುಖ ಅಭಿವೃದ್ಧಿಯ ತುಡಿತ ಇರಬೇಕು.
> ಅಂತರಂಗದ ರಾಷ್ಟ್ರ ಭಕ್ತರಾಗಿ ವಿಶ್ವ ಪ್ರೇಮ ಮೆರೆಯಬೇಕು.
> ಅಧಿಕಾರ ಲಾಭಕ್ಕಾಗಿ ರಾಜ್ಯ/ದೇಶವನ್ನು ದಿವಾಳಿ ಎಬ್ಬಿಸುವ ಕ್ಷುಲ್ಲಕ ರಾಜಕಾರಣಿಗಳನ್ನು, ದೇಶದ ಆರ್ಥಿಕ ಭದ್ರತೆ ದೃಷ್ಟಿಯಿಂದ ದೂರವಿಡಬೇಕು.

ಬಂಧುಗಳೇ...

* **ಪ್ರೀತಿಸಿ ಮೋಸ ಮಾಡಿದವರ ಕ್ಷಮಿಸಿಬಿಡಿ.**
* **ನಂಬಿಸಿ ಮೋಸ ಮಾಡಿದವರನ್ನು ಬಿಟ್ಟುಬಿಡಿ.**
* **ವಿಶ್ವಾಸ ಘಾತುಕರನ್ನು ಕ್ಷಮಿಸಿಬಿಡಿ.**
* **ಕಳ್ಳರನ್ನೂ ಬಿಟ್ಟುಬಿಡಿ.**
* **ವಂಚಕರನ್ನು ಬಿಟ್ಟುಬಿಡಿ.**
* ಇವರೆಲ್ಲಾ ಕೇವಲ ದೀಪದ ಹುಳುಗಳಂತೆ ಅಲ್ಪ ಜೀವಿಗಳು

ಆದರೇ...

* ದೇಶದ ಸಾರ್ವಭೌಮತ್ವಕ್ಕೆ ಕಂಟಕರಾಗುವವರು...
* ದೇಶದ ಅಖಂಡತೆಗೆ ಮುಳ್ಳಾಗಿರುವವರು...
* ದೇಶದ ವಿಭಜನೆಗೆ ನಾಂದಿ ಹಾಡುವವರು...
* ದೇಶದ ಕೀರ್ತಿ, ಪ್ರತಿಷ್ಟೆಗಳಗೆ ಧಕ್ಕೆ ತರುವವರು...

ದೇಶದ ಸ್ವಾಭಿಮಾನಕ್ಕೆ ಕಂಟಕ ಪ್ರಾಯರಾಗಿರುವ ಯಾವುದೇ ದುಷ್ಟ, ಕ್ಷುದ್ರ, ದೈತ್ಯ, ಕಪಟ ಶಕ್ತಿಗಳನ್ನು ಬೆಳೆಯಲು ಬಿಡಬೇಡಿ,

ಅಂತಹ ಬ್ರಹ್ಮಾಂಡ ಶಕ್ತಿ ಚೈತನ್ಯಗಳು ಪ್ರತಿಯೊಬ್ಬರಲ್ಲೂ ಸಿಡಿಯಬೇಕು **ಅಖಂಡ ಭಾರತ, ಸರ್ವಶ್ರೇಷ್ಟ ಭಾರತ, ವಿಶ್ವಗುರು ಭಾರತದ ಪರಿಕಲ್ಪನೆ ಸಾಕಾರವಾಗಲಿ,** ಭಗವದ್ಗೀತೆಯ **ವಸುದೈವ ಕುಟುಂಬಕಂ ವಿಶ್ವ ಮಾನ್ಯವಾಗಲಿ.** ಲೋಕ ಕಲ್ಯಾಣ ಬಯಸುವ ನಮ್ಮ ವೇದ ಉಪನಿಷತ್ತುಗಳಲ್ಲಿ ಅಡಕವಾಗಿರುವ **ಮಾನವೀಯ ಮೌಲ್ಯಗಳು ಪವಿತ್ರ ಗಂಗೆಯಂತೆ, ಮಾನವ ಕೋಟಿಯ ಮನ–ಮನಗಳಲ್ಲಿ ಹರಿದು ಮನುಕುಲದ ಮನಸುಗಳು ಶುಭ್ರವಾಗಿ** ಸರ್ವೇ ಜನಾಃ **ಸುಖಿನೋ ಭವಂತು** ಎಂಬ ವಿಶಾಲ ಮನಸ್ಥಿತಿಯೊಂದಿಗೆ ವಿಶ್ವದಲ್ಲಿ ಬ್ರಾತೃತ್ವ ಮೂಡಲಿ, ಸುಖ–ಶಾಂತಿ–ನೆಮ್ಮದಿಗಳು ನೆಲೆಸಲೆಂದು ಆಶಿಸಿ **ಸರ್ವರಿಗೂ ದೀಪಾವಳಿ ಹಬ್ಬದ ಶುಭಾಷಯಗಳನ್ನು** ತಿಳಿಸುತ್ತಾ, ದಿನಾಂಕ: **05–11–2023ರ ಭಾನುವಾರ ಬೆಂಗಳೂರು ನಗರದಲ್ಲಿ ನಡೆಯಲಿರುವ 13ನೇ ಪ್ರತಿಭೋತ್ಸವದಲ್ಲಿ ಪ್ರತಿಭಾ ಮಾಣಿಕ್ಯಗಳೊಂದಿಗೆ ತಮ್ಮನ್ನು ಭೇಟಿ ಮಾಡಲಿಚ್ಚಿಸುವ,**

**ಆರ್ ಪಿ ರವಿಶಂಕರ್**
ಅಧ್ಯಕ್ಷರು

**ಒಳ್ಳೆಯ ಸಂಬಂಧ ಒಂದು ಪುಸ್ತಕವಿದಂತೆ, ಪುಸ್ತಕ ಎಷ್ಟೇ ಹಳೆಯದಾದರೂ ಅದರಲ್ಲಿನ ಪದಗಳು ಬದಲಾಗುವುದಿಲ್ಲ.**

# ಕರ್ನಾಟಕ ಆರ್ಯವೈಶ್ಯ ಮಹಾಸಭಾ(ರಿ)

20/10/2023

16, ಶೇಷಾದ್ರಿ ರೋಡ್, ಗಾಂಧೀನಗರ, ಬೆಂಗಳೂರು – 560009
ದೂರವಾಣಿ – 080 22206151/52 ಈ-ಮೇಲ್– kavmss@gmail.com ವೆಬ್‌ಸೈಟ್ – www.kavms.com

## ಸರ್ವಸದಸ್ಯರ ಸಭೆಯ

## ಸೂಚನಾ ಪತ್ರ

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಸರ್ವಸದಸ್ಯರ ಸಭೆಯನ್ನು ದಿನಾಂಕ **05–11–2023ರ ಭಾನುವಾರ ಮಧ್ಯಾಹ್ನ 3.00 ಘಂಟೆಗೆ** ಮಹಾಸಭೆಯ ಅಧ್ಯಕ್ಷರಾದ ಶ್ರೀಯುತ ಆರ್ ಪಿ ರವಿಶಂಕರ್‌ರವರ ಅಧ್ಯಕ್ಷತೆಯಲ್ಲಿ ರಾಣಿ ಅಬ್ಬಕ್ಕ ಆಟದ ಮೈದಾನ, ಮಹಾಲಕ್ಷ್ಮೀ ಪುರಂ, ಬೆಂಗಳೂರಿನಲ್ಲಿ ಕರೆಯಲಾಗಿದೆ.

### ಕಾರ್ಯಸೂಚಿ

1. ಪ್ರಾರ್ಥನೆ
2. ಸ್ವಾಗತ
3. ಸಭೆಯ ಸೂಚನಾ ಪತ್ರದ ಮಂಡನೆ ಹಾಗೂ ಅಂಗೀಕಾರ.
4. ಹಿಂದಿನ ಸರ್ವಸದಸ್ಯರ ಸಭೆಯ ನಡವಳಿಕೆಗಳ ಅನುಮೋದನೆ ಹಾಗೂ ಅಂಗೀಕಾರ.
5. 2022–23ನೇ ಸಾಲಿನ ಆಡಳಿತ ಮಂಡಳಿ ವರದಿ ಮಂಡನೆ ಮತ್ತು ಅನುಮೋದನೆ.
6. 2022–23ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ಹಾಗೂ ಲೆಕ್ಕ ಪರಿಶೋಧಕರ ವರದಿ ಮಂಡನೆ ಹಾಗೂ ಅನುಮೋದನೆ.
7. 2023–24ರ ಆರ್ಥಿಕ ವರ್ಷಕ್ಕೆ ಲೆಕ್ಕ ಪರಿಶೋಧಕರ ನೇಮಕ.
8. ಮಹಾಸಭೆ ಆಶ್ರಯದಲ್ಲಿ ಪ್ರಾರಂಭಿಸಿರುವ ಶ್ರೀ ವಾಸವಿ ಎಜುಕೇಷನ್ ಕೋ–ಆಪ್ ಸೊಸೈಟಿ ನಿಯಮಿತದ ಬಗ್ಗೆ.
9. ಇತರೆ ವಿಷಯಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ.
10. ಅಧ್ಯಕ್ಷರ ಭಾಷಣ.
11. ವಂದನಾರ್ಪಣೆ.

ವಂದನೆಗಳೊಂದಿಗೆ
**ಕೆ ಆರ್ ಕೃಷ್ಣ, ಹೆಚ್ ಜೆ ಹನುಮಂತಯ್ಯ**
ಪ್ರಧಾನ ಕಾರ್ಯದರ್ಶಿಗಳು

**ಸೂಚನೆ:**

- ★ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸತಕ್ಕ ಯಾವುದೇ ವಿಷಯವಿದ್ದಲ್ಲಿ ಕನಿಷ್ಟ 7 ದಿನಗಳ ಮುಂಚಿತವಾಗಿ ಬರೆದು ಕಳುಹಿಸುವುದು. ಆದ್ಯತೆ ಮೇರೆಗೆ ವಿಷಯವನ್ನು ತೆಗೆದುಕೊಳ್ಳಲಾಗುವುದು.
- ★ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.
- ★ ಆಡಳಿತ ಮಂಡಳಿ ವರದಿ ಹಾಗೂ ಆಡಿಟ್ ಆದ ಲೆಕ್ಕಪತ್ರಗಳು ದಿನಾಂಕ 01–11–2023 ರಿಂದ ಮಹಾಸಭೆ ಕಛೇರಿಯಲ್ಲಿ ಪಡೆಯಬಹುದು ಅಲ್ಲದೆ ಮಹಾಸಭೆಯ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

SATHYA PARVA CHITS (PVT) LTD
BENGALURU
Since 2010

SATHYA PARVA CHITS (PVT) LTD
Lets Grow Together

We have served more than 1200 customers with a chit range of 1 Lakh to 1 Crore. The company's mantra is to be customer friendly, owing to simple documentation processes and faster payments. The company has built a strong and wide network across the state and provides classic Financial chit services to many customers.

NEW CHITS STARTING

| Chit Amount | Total Months | Monthly Payable |
|---|---|---|
| 01 Lakh | 20 Months | 5,000 |
| 01 Lakh | 25 Months | 4,000 |
| 02 Lakhs | 20 Months | 10,000 |
| 03 Lakhs | 30 Months | 10,000 |
| 06 Lakhs | 20 Months | 30,000 |
| 25 Lakhs | 20 Months | 1,25,000 |
| 50 Lakhs | 20 Months | 2,50,000 |
| 1 Crore | 20 Months | 5,00,000 |

#108, Sri Chakra, 1st Floor
East Park Road, 8th Cross, Opp to Vasavi Mahal
Malleshwaram, Bengaluru 560003

Contact : 080-23347943, 41525190,9886485777

Best Wishes
Subhashree Enterprises (R)
A Renowned Financial Institution
serving since 1989

#108, Sri Chakra, 1st Floor
East Park Road, 8th Cross, Opp to Vasavi Mahal
Malleshwaram, Bengaluru 560003

Contact : 080-23347943, 41525190

Best Retail Partner 2023 awardee from Cordelia Cruis
INFINITY TOURS
TRAVEL THE WORLD

TOURS
TICKETING
VISA

FOREX
INSURANCE
MICE



WHY INFINITY?
8+ years of experienced professionals
80+ diverse destinations all over the world
800+ happy travellers to date across South India

CELEBRATE THIS FESTIVAL SEASON WITH OUR GROUP TOURS

DUBAI & ABU DHABI
08/NOV/2023
5 NIGHTS / 6 DAYS
STARTS @ 1,04,900/-
EX-BLR (EMIRATES)

SINGAPORE & MALAYSIA
19/DEC/2023
6 NIGHTS / 7 DAYS
STARTS @ 1,19,900/-
EX-BLR (MALAYSIAN)

LAKSHADWEEP CRUISE
20/DEC/2023
3 NIGHTS / 4 DAYS
STARTS @ 54,900/-
EX-BLR (INDIGO)

BEST OF VIETNAM
10/JAN/2024
7 NIGHTS / 8 DAYS
STARTS @ 1,23,900/-
EX-BLR (MALAYSIAN)

For More Details: Infinity Tours Ltd, #108, 3rd Floor, Srichakra Building,
Opp Vasavi Mahal, East Park Road, 8th Cross, Malleshwaram, Bengaluru 03.
Mob: +91 8880333337 / 27, E-mail: info@tourifinity.in

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ-ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152